ಉಪಾಧ್ಯಕ್ಷರು :- ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ, ಸಾಕು.

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರಗಳೆಲ್ಲ ಮೊದಲಿನಿಂದಲೂ ಇದೇ ರೀತಿ ಭರವಸೆ ಕೊಡುತ್ತಾ ಬಂದಿವೆ. ಪ್ರತಿ ಸರ್ಕಾರಗಳು ಬಂದು ಭರವಸೆ ಕೊಟ್ಟಿವೆ. ತಮ್ಮ ಕಾಲದಲ್ಲಿ ಆಗುತ್ತದೆಂಬ ನಂಬಿಕೆ ಮೇಲೆ ಈ ಪ್ರಶ್ನೆಯನ್ನು ಎತ್ತಿದ್ದೇವೆ. ಆದುದರಿಂದ ಒಂದು ತಿಂಗಳಿನಲ್ಲಿ...

ಶ್ರೀ ಸಿದ್ಧರಾಮಯ್ಯ :- ಈ ಪ್ರಸ್ತಾಪ ಪ್ಲಾನಿಂಗ್ ಡಿಪಾರ್ಟ್‌ಮೆಂಟ್, ಫೈನಾನ್ಸ್ ಡಿಪಾರ್ಟ್‌ಮೆಂಟ್ ಪರಿಶೀಲನೆಯಾಗಿ ಅವರು ಹೇಳಿದಂತೆ ರೋಸ್ಟರ್ ಎಲ್ಲಾ ಮಾಡಿದ ಮೇಲೆ ಕ್ಯಾಬಿನೆಟ್‌ಗೆ ಬರಬೇಕಾಗುತ್ತದೆ, ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಆದುದರಿಂದ ಇದೇ ಆಗ್ಸ್ಟ್, ಸೆಪ್ಟೆಂಬರ್, ನವೆಂಬರ್ ಎಂದು ಹೇಳುವುದಕ್ಕಿಂತ ಆದಷ್ಟು ತೀವ್ರವಾಗಿ ಮಾಡಿ ಆದಷ್ಟು ಜಾಗ್ರತೆ ತೆಗೆದು ಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತಾರೆಂದು ಶ್ರೀ ಸಿದ್ಧರಾಮಯ್ಯನವರ ಮೇಲೆ ನಂಬಿಕೆ ಇಟ್ಟುಕೊಂಡು ನಮ್ಮ ಸ್ನೇಹಿತರು ವಾಪಸ್ಸು ಸ್ಥಳಕ್ಕೆ ಬರಲಿ ಎಂದು ಕೇಳಿಕೊಳ್ಳುತ್ತೇನೆ.

(ಶ್ರೀ ಪುಟ್ಟಣ್ಣಯ್ಯನವರು ಮತ್ತು ಶ್ರೀ ಶ್ರೀರಾಮರೆಡ್ಡಿಯವರು ಧರಣಿಯನ್ನು ಹಿಂತೆಗೆದುಕೊಂಡರು).

(2) **ಕಾಡುಗಳ್ಳ ವೀರಪ್ಪನ್ ಬಗ್ಗೆ.**

+**ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :-** ಮಾನ್ಯ ಉಪಾಧ್ಯಕ್ಷರೇ, ಕಾಡುಗಳ್ಳ ವೀರಪ್ಪನ್ ಬಗ್ಗೆ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಇದು ಬಹಳ ಪ್ರಮುಖವಾದ ವಿಚಾರ. ತಮಿಳ್ನಾಡು ಸರ್ಕಾರ ವೀರಪ್ಪನ್‌ಗೆ ಕ್ಷಮಾಪಣೆ ಕೊಡಬೇಕೆಂಬ ದೃಷ್ಟಿಯಲ್ಲಿ ಅವರ ಧೋರಣೆ ಹೊರಟಿದೆ, ಮತ್ತು ಕರ್ನಾಟಕ ಸರ್ಕಾರ ಅವನನ್ನು ಹಿಡಿಯಬೇಕೆಂದು ಏನು ಒಬ್ಬ ಪೋಲೀಸ್ ಅಧಿಕಾರಿ ಶ್ರೀ ಶಂಕರ ಬಿದ್ರಿ ಅವರನ್ನು ನೇಮಕ ಮಾಡಿದ್ದರು ಆ ವ್ಯಕ್ತಿಯನ್ನು ಈಗ ಬದಲಾವಣೆ ಮಾಡಿ ಅವರು ಈಗ ಬೇರೆ ಇಲಾಖೆಗೆ ಬಂದಿದ್ದಾರೆ. ಆದುದರಿಂದ ಅವನನ್ನು ಹಿಡಿಯತಕ್ಕ ವ್ಯವಸ್ಥೆಯನ್ನು ಏನು ಸರ್ಕಾರ ಮಾಡಿತ್ತು ಆ ವ್ಯವಸ್ಥೆ ಇವತ್ತು ಕುಸಿದು ಬಿದ್ದಿದೆ, ಅದಕ್ಕೆ ಅಷ್ಟು ಶಕ್ತಿ ಕಡಿಮೆಯಾಗಿದೆಯೆಂದು ನಾನು ಅಂದುಕೊಂಡಿದ್ದೇನೆ. ಆ ಭಾಗಗಳಲ್ಲಿ ಅಂದರೆ ಆದು ಚಾಮರಾಜನಗರ ಆಗಬಹುದು, ಕೊಳ್ಳೇಗಾಲ ಆಗಬಹುದು, ಯಳಂದೂರು ಆಗಬಹುದು, ಆ ಭಾಗದಲ್ಲಿ ನಡೆದಿರತಕ್ಕ ಘಟನೆ ಮಹದೇಶ್ವರ ಬೆಟ್ಟದಲ್ಲಿ ನಡೆದಿರತಕ್ಕ ಒಂದು ಭಯಾನಕ ಪರಿಸ್ಥಿತಿ ಎಲ್ಲರಿಗೆ ಗೊತ್ತಿದೆ. ಆತ ಸರ್ಕಾರದ ಅನೇಕ ಉನ್ನತಾಧಿಕಾರಿಗಳನ್ನು ಆತ ಬಲಿ ತೆಗೆದುಕೊಂಡಿದ್ದಾನೆ. ಬಹಳ ಅಪ್ರಮಾಣಿಕವಾಗಿ ನಡೆದಿದ್ದಾನೆ, ನೂರಾರು ಕೋಟಿ ರೂಪಾಯಿ ನಷ್ಟವಾಗಿದೆ. ಭಯಭೀತಿ ಉಂಟಾಗತಕ್ಕ ಘಟನೆ ಅಲ್ಲಿ ನಡೆದಿದೆ;

ಮತ್ತು ಈಗಿನ ಕೆಲವು ಶಾಸಕರನ್ನು ಅಪಹರಣ ಮಾಡುತ್ತಾನೆಂಬುದು ಮಾನ್ಯ ಅಧ್ಯಕ್ಷರ ಗಮನಕ್ಕೆ ಬಂದಿದೆ. ಈ ಮಧ್ಯದಲ್ಲಿ ಅವನ ಬಗ್ಗೆ ಸಂದರ್ಶನಗಳು ಬರುತ್ತಿವೆ, ವಿಡಿಯೋ ಕ್ಯಾಸೆಟ್‌ಗಳು ಬರುತ್ತಿವೆ. ಅವನು ಒಬ್ಬ ಮಹಾತ್ಮ ಎಂಬ ರೀತಿಯಲ್ಲಿ ನಡೆಯುತ್ತಿದೆ. ಅವನು ರಾಜಕಾರಣಿಗಳ ಮೇಲೆ ಉಪದೇಶ ಮಾಡುತ್ತಿದ್ದಾನೆ. ಮುಖ್ಯಮಂತ್ರಿ ಹೇಗಿರಬೇಕು, ಪ್ರಧಾನಿ ಹೇಗಿರಬೇಕು ತಮಿಳ್ನಾಡು ಹೇಗಿರಬೇಕೆಂದು ಉಪದೇಶ ಮಾಡುತ್ತಿದ್ದಾನೆ. ಕ್ಯಾಸೆಟ್‌ಗಳು ರಿಲೀಸ್ ಆಗುತ್ತಿವೆ. ಪ್ರತಿದಿನ ಸೂರ್ಯ ಟಿ.ವಿ.ಯಲ್ಲಿ ಜನರಿಗೆ ಅವನು ಹೇಳುವಂತದ್ದು ಮಾತ್ರ ಬರುತ್ತಿದೆ. ಅದಕ್ಕೆ ಉತ್ತರ ಕೊಡತಕ್ಕ ವ್ಯವಸ್ಥೆ ಇಲ್ಲ, ಇಷ್ಟೆಲ್ಲ ನಷ್ಟವಾಗಿ, ಇಷ್ಟೆಲ್ಲ ದುರಂತ ನಡೆದು ಕರ್ನಾಟಕ ಸರ್ಕಾರ ಇವತ್ತು ಹಿಡಿಯುತ್ತೇವೆ, ನಾಳೆ ಹಿಡಿಯುತ್ತೇವೆ, ನಾಲ್ಕು ದಿನಗಳಲ್ಲಿ ಹಿಡಿಯುತ್ತೇವೆಂದು ಹೇಳಿ, ಶ್ರೀ ವೀರೇಂದ್ರ ಪಾಟೀಲರ ಸರ್ಕಾರದಿಂದ ಇಲ್ಲಿಯವರೆಗೆ ಒಂದಲ್ಲ ಒಂದು ರೀತಿಯಲ್ಲಿ ಅವನ ಮೇಲೆ ಈ ಸದನದಲ್ಲಿ ಹೇಳಿಕೊಂಡು ಬಂದರು. ಶ್ರೀ ಶಂಕರ ಬಿದ್ರಿ ಎಂಬ ಒಳ್ಳೆಯ ಅಧಿಕಾರಿಯನ್ನು ಇಟ್ಟಿದ್ದರು; ಅವರು ಹಿಡಿಯಬಹುದೆಂಬ ನಂಬಿಕೆ ನಮಗೆಲ್ಲ ಇತ್ತು, ಬಹಳ ಪ್ರಯತ್ನ ನಡೆಯಿತು ಸರ್ವ ಪ್ರಯತ್ನ ನಡೆಯಿತು, ಎಲ್ಲ ಆಯಿತು. ಈಗ ಶ್ರೀ ಶಂಕರ ಬಿದ್ರಿ ಅವರು ಬದಲಾವಣೆಯಾಗಿ ಬೇರೆಯವರು ಬಂದಿದ್ದಾರೆ. ಬದಲಾವಣೆ ಮಾಡಿದುದರ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಯಾವು ಒಂದು ಉದ್ದೇಶಕ್ಕೋಸ್ಕರ ಒಂದು ಸಂಘಟನೆ ಮಾಡಿ ವ್ಯವಸ್ಥೆ ಮಾಡಿತ್ತು ಮತ್ತು ಗಡಿ ಭದ್ರಾತಾ ಪಡೆಯವರನ್ನು ಅಲ್ಲಿ ಕರೆಸಿತ್ತು ಆ ಗಡಿ ಭದ್ರತಾ ಪಡೆಯವರು 3 ತಿಂಗಳ ಕಾಲ ಇಡೀ ಬೆಟ್ಟವನ್ನು ನೋಡಿ ಕೊನೆಗೆ ಅಸಹಾಯಕರಾಗಿದುದರಿಂದ ಗಡಿ ಭದ್ರತಾ ಪಡೆಯವರನ್ನು ಕೇಂದ್ರ ಸರ್ಕಾರ ಹಿಂದಕ್ಕೆ ಕರೆಸಿಕೊಂಡಿತು. ಮತ್ತೆ ಗಡಿ ಭದ್ರತಾ ಪಡೆಯವರನ್ನು ಕರೆಸಿ ಕೊಳ್ಳಬಹುದು, ಕರೆಸುತ್ತಾರೆ, ಕರೆಸುವುದಿಲ್ಲ ಎಂಬ ಬಗ್ಗೆ ಒಂದು ಸಮಗ್ರವಾದ ನೀತಿ ಚಿಂತನೆ ಆಗಲಿಲ್ಲ. ಈ ಮಧ್ಯೆ ತಮಿಳ್ನಾಡಿನ ಹಿಂದಿನ ಮುಖ್ಯಮಂತ್ರಿಗಳು ಇದ್ದಾಗ ಅವರು ಹಿಡಿಯಲೇಬೇಕೆಂಬ ನಿರ್ಧಾರಕ್ಕೆ ಬಂದಿದ್ದರು. ಆದರೆ ಈಗಿನ ಸರ್ಕಾರ ಏನು ಬಂದಿದೆ ಅದು ಸ್ವಲ್ಪ ಮೃದು ಧೋರಣೆ ತಾಳಿದೆ. ಈ ದೃಷ್ಟಿಯಲ್ಲಿರುವಾಗ ನಮಗೆ ಸಮನ್ವಯದ ಕೊರತೆ, ಒಂದು ಕಡೆ ತಮಿಳ್ನಾಡಿನವರ ಸಹಕಾರ ಇಲ್ಲ. ತಮಿಳ್ನಾಡು ಸಂಪೂರ್ಣವಾಗಿ ಹಿಡಿಯಬಾರದೆಂಬ ದೃಷ್ಟಿಯಿಂದ ವ್ಯವಸ್ಥಿತವಾಗಿ ಅಭಿಪ್ರಾಯವನ್ನು ಕ್ರೋಢೀಕರಿಸುತ್ತಿದೆ. ಇದರ ಬಗ್ಗೆ ಕರ್ನಾಟಕ ಸರ್ಕಾರದ ಜೊತೆ ತಮಿಳ್ನಾಡು ಸರ್ಕಾರದವರು ಮಾತುಕತೆ ಆಡಿದ್ದಾರೆಯೇ? ಅವನನ್ನು ಹಿಡಿಯುವ ಬಗ್ಗೆ ಕರ್ನಾಟಕ ಸರ್ಕಾರದ ಸ್ಪಷ್ಟವಾದ ನಿಲುವು ಏನು ಸ್ಪಷ್ಟವಾದ ನೀತಿ ಏನು? ವಿಡಿಯೋ ಕ್ಯಾಸೆಟ್‌ಗಳನ್ನೆಲ್ಲ ನಮ್ಮ ನ್ಯಾಯಾಲಯದ ಮುಂದೆ ಮಂಡಿಸಬೇಕು. ಉನ್ನತ ಐಪಿಎಸ್. ಅಧಿಕಾರಿಯನ್ನು ಕರ್ನಾಟಕದ ಉತ್ತಮವಾದ ಅಧಿಕಾರಿಗಳನ್ನು ಕೊಂದದ್ದು ತಾವು ನೋಡಿದ್ದೀರಿ. ಅಮಾಯಕ ಜನರು ಸತ್ತಿದ್ದಾರೆ. ಇದು ಎಲ್ಲ ನಡೆದಿರತಕ್ಕ ಸಂದರ್ಭದಲ್ಲಿ ಅವನಿಗೆ ಕ್ಷಮಾಪಣೆ ಕೊಡಬೇಕೆಂಬ ಕೂಗು ಏನು ಎದ್ದಿದೆ ಇದು ಒಳ್ಳೆಯ ನೀತಿ ಅಲ್ಲ ಎಂಬುದು ಒಂದು. ಮತ್ತು ಆ ಭಾಗದಲ್ಲಿ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಮಹದೇಶ್ವರ ಬೆಟ್ಟದ ಭಾಗದಲ್ಲಿರತಕ್ಕ ನೂರಾರು ಹಳ್ಳಿಗಳೇನಿವೆ ಆ ಹಳ್ಳಿಗಳ ಅಭಿವೃದ್ಧಿಗೆ ವಿಶೇಷವಾದಂಥ ಯೋಜನೆ ಹಾಕುತ್ತೇವೆ ಎಂದು ಹಿಂದಿನ ಸರ್ಕಾರದವರು ಹೇಳಿದ್ದರು. ಅದರ ಜೊತೆಗೆ ಅಲ್ಲಿ ಜನರಿಗೆ ಭಯಭೀತರಾಗದ ರೀತಿ ಪೋಲೀಸ್ ಠಾಣೆಗಳನ್ನು ಕೊಡಬೇಕು ಎಂದು ಹೇಳಿದ್ದು ಅದು ಇವತ್ತಿನವರೆಗೆ ನಡೆದಿಲ್ಲ.

ಉಪಾಧ್ಯಕ್ಷರು :– ತಾವು ಭಾಷಣ ಮಾಡುವ ಹಾಗಿಲ್ಲ. ಸಂಕ್ಷಿಪ್ತವಾಗಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ :– ನಾನು ಮುಗಿಸುತ್ತೇನೆ. ಆದ್ದರಿಂದ, ಅಧ್ಯಕ್ಷರೇ, ತಮಗೆ ಏನು ಹೇಳುತ್ತೇನೆ ಅಂದರೆ, ಇದು ಅಷ್ಟು ಲಘುವಾಗಿ ತೆಗೆದುಕೊಳ್ಳತಕ್ಕದ್ದಲ್ಲ. ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಎಲ್ಲರ ಬಗ್ಗೆಯೂ ಉಪದೇಶ ಮಾಡುವುದಕ್ಕೆ ಈ ಒಬ್ಬ ಕೊಲೆಗಡುಕ, ಒಬ್ಬ ಸ್ವಾಮೀಜಿ ತರಹ ವೇಶವನ್ನು ಹಾಕಿ, ಉಪದೇಶ ಮಾಡುವುದಕ್ಕೆ ಹೊರಟಿರತಕ್ಕ ನೀತಿ ಏನಿದೆ ಇದು ಬಹಳ ಅತ್ಯಂತ ಕ್ರೂರವಾದಂಥ ವಿಚಾರ. ಇದನ್ನು ಪಕ್ಷರಹಿತವಾಗಿ ಎಲ್ಲ ಪಕ್ಷದವರು ನಾವು ಸಂಪೂರ್ಣವಾಗಿ ಮರೆತು ಈ ಬಗ್ಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕು ಎಂದು ಹೇಳಬೇಕು. ನಮ್ಮಲ್ಲಿ ಕಾನೂನು ಪರಿಸ್ಥಿತಿ ಏನಾಗಿದೆ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಮುಖ್ಯ ಮಂತ್ರಿಗಳನ್ನು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

+ **ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು)** :– ಮುಂಚೆ ಯಾವುದೇ ತಿಳುವಳಿಕೆ ಕೊಡದೇ ಈ ಪ್ರಶ್ನೆಯನ್ನು ಕೇಳಿರುವುದರಿಂದ, ಮಾನ್ಯ ಸದಸ್ಯರಿಗೆ ಗೊತ್ತು ನಾವು ಏನೇನು ವ್ಯವಧಾನಗಳನ್ನು ಮಾಡುತ್ತಿದ್ದೇವೆ, ಯಾವ ಅಧಿಕಾರಿಯನ್ನು ವಾಪಸ್ ತೆಗೆದುಕೊಂಡಿದ್ದೇವೆ, ಯಾವ ಅಧಿಕಾರಿಯನ್ನು ನಾವು ಕಳುಹಿಸಿದ್ದೇವೆ, ಮತ್ತು ನಮ್ಮ ಕಾರ್ಯಾಚರಣೆಯ ವಿವರಗಳನ್ನು ಸದನದಲ್ಲಿ ಹೇಳುವುದು ಸೂಕ್ತ ಅಲ್ಲ. ಆದರೆ ಸರ್ಕಾರ ಮಾತ್ರ ಆತನನ್ನು ಬಂಧಿಸಬೇಕು, ಆತ ಮಾಡಿರತಕ್ಕ ಎಲ್ಲಾ ಪಾಪ ಮತ್ತು ಅಪರಾಧಗಳಿಗೆ ಆತನಿಗೆ ಶಿಕ್ಷೆಯಾಗಬೇಕು ಇದರ ಬಗ್ಗೆ ಯಾರೇ ಕ್ಷಮಾದಾನ ಮಾಡುವ ಬಗ್ಗೆ ನಮ್ಮ ಸರ್ಕಾರ ಯಾವಾಗಲೂ ಹೇಳಿಲ್ಲ. ಅಲ್ಲಿ ಯಾರೋ ಇದನ್ನು ಕ್ಷಮಾದಾನ ಮಾಡುತ್ತಾರಂತೆ, ಪೂಲನ್ ದೇವಿಗೆ ಮಾಡಿದಹಾಗೆ ಅಂತ. ಪೂಲನ್ ದೇವಿ ಪ್ರಶ್ನೆ ಬೇರೆ, ಇದೇ ಪ್ರಶ್ನೆ ಬೇರೆ. ಆದ್ದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಆತನ ಸುಳಿವು ಮತ್ತು ಆತನನ್ನು ಹೇಗೆ ಬಂಧಿಸಬೇಕು ಅಥವಾ ಆತನನ್ನು ಹತೋಟಿಗೆ ತರಬೇಕು ಅಥವಾ ಕೊಂದುಹಾಕಬೇಕು, ಈ ವಿಷಯಗಳ ಬಗ್ಗೆ ನಾವು ಸದನದಲ್ಲಿ ಚರ್ಚೆ ಮಾಡುವುದು ಸರಿಯಲ್ಲ ಎಂದು ಅವರೂ ಒಪ್ಪುತ್ತಾರೆ.

ಉಪಾಧ್ಯಕ್ಷರು :– ಈಗ ಚರ್ಚೆ ಸಾಕು. ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ಅದರ ಬಗ್ಗೆ ನಾನು ಮಾತನಾಡುವುದಿಲ್ಲ.

ಉಪಾಧ್ಯಕ್ಷರು :– ಈಗ ಸಮಯ ಇಲ್ಲ. ನಾನು ಹೇಳುವುದು ಏನೆಂದರೆ ಈಗ ಅವರು ಏನು ಹೇಳಿದರು, ಅದನ್ನು ಇಲ್ಲಿ ಚರ್ಚೆ ಮಾಡತಕ್ಕದ್ದು ಅವಶ್ಯಕತೆ ಇಲ್ಲ. ಅವರನ್ನು ಖುದ್ದಾಗಿ ಭೇಟಿಯಾಗಿ ತಾವು ವಿಚಾರ ವಿನಿಮಯ ಮಾಡಿರಿ.

ಶ್ರೀ ವಾಟಾಳ್ ನಾಗರಾಜ್ :- ನಾನು ಸಂಪೂರ್ಣ ಚರ್ಚೆಗೆ ಹೋಗುವುದಿಲ್ಲ. ವಿವರ ಕೊಡಿ ಎಂದು ಕೇಳಲಿಲ್ಲ. ಅವರು ಹೇಳಿದ್ದನ್ನು ನಾನು ತಳ್ಳಿಹಾಕುವುದಕ್ಕೆ ಹೋಗುವುದಿಲ್ಲ. ನನಗನ್ನಿಸುತ್ತದೆ, ಇದು ಎಷ್ಟು ದಿನ ತಳ್ಳಬೇಕು? ಮತ್ತೆ ತಾವೇನಾದರೂ ಗಡಿ ಭದ್ರತಾ ಪಡೆಯವರನ್ನು ಕರೆಸುತ್ತೀರೋ? ತಾವು ಸ್ಪಷ್ಟಪಡಿಸಿದ್ದೀರಿ ಶಿಕ್ಷೆ ಯಾಗಲೇಬೇಕು, ಕ್ಷಮಾದಾನ ಕೊಡುವುದಿಲ್ಲ ಅಂತ. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇದು ಎಲ್ಲರೂ ಒಪ್ಪತಕ್ಕಂಥದ್ದು, ಎಲ್ಲಾದರೂ ಉಂಟೇ ಈ ದೇಶದಲ್ಲಿ. ಆದ್ದರಿಂದ ತಮಗೆ ನಾನು ಹೇಳುತ್ತೇನೆ. ಮತ್ತೆ ಆ ಒಂದು ಸಂಘಟನೆಯನ್ನು ಚುರುಕುಗೊಳಿಸುವುದಕ್ಕೆ ಅವನನ್ನು ಹಿಡಿಯತಕ್ಕ ಸಂಘಟನೆಯ ವ್ಯವಸ್ಥೆಯನ್ನು ಚುರುಕುಗೊಳಿಸುವುದಕ್ಕೆ ಮತ್ತೆ ಗಡಿಭದ್ರತಾ ಪಡೆಯನ್ನು ಕರೆಸುತ್ತಿರೋ? ತಾವು ಏನು ಮಾಡುತ್ತೀರಿ ಎನ್ನುವುದು ಒಂದು. ಮತ್ತು ತಮಿಳುನಾಡಿನ ಸರ್ಕಾರದವರು ನಿಮ್ಮ ಜೊತೆಯಲ್ಲಿ ಏನಾದರೂ ಈ ವಿಚಾರದಲ್ಲಿ ಮಾತುಕತೆ ಆಡಿದ್ದಾರೆಯೇ ಎನ್ನುವುದು ಅಷ್ಟೇ ಸಾರ್ ನಾನು ಕೇಳುವುದು.

ಶ್ರೀ ಜೆ. ಹೆಚ್. ಪಟೇಲ್ :- ತಮಿಳು ನಾಡು ಸರ್ಕಾರ ಎಲ್ಲಾ ರೀತಿಯಿಂದ ನಮ್ಮ ಸರ್ಕಾರದೊಡನೆ ಸಹಕಾರ ಕೊಡುತ್ತಾ ಇದೆ. ಅವರಿಗೂ ನಮ್ಮ ಸರ್ಕಾರದಷ್ಟೇ ಆತನನ್ನು ಬಂಧಿಸಬೇಕು ಅನ್ನತಕ್ಕಂಥ..... ಹಿಂದಿನವರು ಏನು ಮಾಡಿದ್ದರು, ಆಥವಾ ಈಗ ಪೊಲಿಟಿಕಲ್ ಛೇಂಜ್ ಆಗಿರುವುದರಿಂದ we need not suspect their bonafide?

ಶ್ರೀ ಬಿ. ಮುನಿಯಪ್ಪ :- ಈಗ ಏನು ಸನ್ಯಾನ್ಯ ಹಿರಿಯ ಸಚಿವರಾದ ನಾಗರಾಜ್ ಅವರು ಹೇಳಿದರು, ಹಾಗೆಯೇ ಮುಖ್ಯಮಂತ್ರಿಗಳು ಹೇಳಿದ್ದೆಲ್ಲಾ ನೂರಕ್ಕೆ ನೂರು ನಾನು ಒಪ್ಪುತ್ತೇನೆ. ಆದರೆ ಇವತ್ತು ಯಾವ ವಾತವರಣದಲ್ಲಿ ನಾವಿದ್ದೇವೆ ಎಂದು ಕೇಳುವಾಗ ಲೋಕಸಭಾ.....

ಒಬ್ಬ ಮಾನ್ಯ ಸದಸ್ಯರು :- ವಾಟಾಳ್ ನಾಗರಾಜ್ ಅವರು ಯಾವಾಗ ಹಿರಿಯ ಸಚಿವರಾದರು?

ಶ್ರೀ ಬಿ. ಮುನಿಯಪ್ಪ :- ಹಿರಿಯ ಸದಸ್ಯರು.

ಶ್ರೀ ವಾಟಾಳ್ ನಾಗರಾಜ್ :- ನಾನು ವೀರಪ್ಪನ್ ಹೆಸರು ಹೇಳಿದತಕ್ಷಣ ನನಗೊಂದು ಆದೃಷ್ಟ ಹೊಡೆಯಿತು ನೋಡಿ.

ಶ್ರೀ ಬಿ. ಮುನಿಯಪ್ಪ :- ಲೋಕಸಭಾ ಚುನಾವಣೆಗೆ ಮುನ್ನ ಸನ್ ಟಿ.ವಿ. ಎನ್ನುವಂಥ ಒಂದು ಟಿ.ವಿ.ಯಲ್ಲಿ ವೀರಪ್ಪನ್ ಸಂದರ್ಶನ ಆಗುತ್ತದೆ. ಸಂದರ್ಶನ ಆಗುವಾಗ ಆತ ಹೇಳುತ್ತಾನೆ, ಒಬ್ಬ ಪತ್ರಕರ್ತ, ಪತ್ರಕರ್ತ ಅಂದರೆ ನಾನು ಈ ಪತ್ರಕರ್ತರಿಗೆ ಹೋಲಿಸುವುದಿಲ್ಲ. ಏಕೆಂದರೆ ಪತ್ರಕರ್ತರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಅಮೆರಿಕಾದಂಥ ದೇಶದಲ್ಲೇ ವಾಟರ್‌ಗೇಟ್ ಪ್ರಕರಣವನ್ನು ಹೊರಗಡೆಗೆ

ತಂದವರು ಪತ್ರಕರ್ತರು. ಆದರೆ ಅಲ್ಲಿ ಯಾರೋ ಒಬ್ಬ ಪತ್ರಕರ್ತ, ಮೂರನೇ ದರ್ಜೆ ಪತ್ರಕರ್ತ ಕಾಡಿನಲ್ಲಿ ಹೋಗಿ ವೀರಪ್ಪನನ್ನು ಭೇಟಿ ಮಾಡಿ ವೀಡಿಯೋ ಕ್ಯಾಸೆಟ್ ತಂದು ಸನ್ ಟಿ.ವಿ. ಎನ್ನುವಂಥ ಟಿ.ವಿ. ಮಾಧ್ಯಮದಲ್ಲಿ ಹಾಕಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರನ್ನು ಮೊದಲೊಬ್ಬ ಮುಖ್ಯಮಂತ್ರಿಯಾಗಿದ್ದನಲ್ಲ ಅವನು ಇವನು ಅಂತ ಹೇಳುತ್ತಾರೆ. ಅವನ ಹೆಸರೇನು, ಮೀಸೆ ಇಲ್ಲದೇ ಇರುತ್ತಾರಲ್ಲ, ಅದಕ್ಕೆ ಮುಂಚೆ ಒಬ್ಬ ಇದ್ದನಲ್ಲ ಅವನ ಹೆಸರೇನು, ಹೀಗೆ ಕೇಳುತ್ತಾನೆ. ಅದನ್ನು ಒಂದು ಟಿ.ವಿ. ಪ್ರಚಾರ ಮಾಡುತ್ತದೆ ಅಂದರೆ ಈ ದೇಶದಲ್ಲಿ ಅದಕ್ಕಿಂತ ತಲೆ ತಗ್ಗಿಸುವಂಥ ಕೆಲಸ ಬೇರೆ ಯಾವುದೂ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅವನು ಚುನಾವಣಾ ಪ್ರಚಾರ ಮಾಡುತ್ತಾನೆ ಒಂದು ಪಕ್ಷಕ್ಕೆ. ಈ ಸರ್ಕಾರ, ಈ ಮುಖ್ಯಮಂತ್ರಿ ತಮಿಳುನಾಡು ಮುಖ್ಯಮಂತ್ರಿಯಾಗಿದ್ದವರು ಈ ತರಹ ತಪ್ಪು ಮಾಡಿದ್ದಾರೆ, ಕರ್ನಾಟಕದಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಇಂಥಿಂಥ ತಪ್ಪು ಮಾಡಿದ್ದಾರೆ; ಈ ರೀತಿ ಹೇಳುವಂಥ ಮಾಧ್ಯಮಗಳು, ಟಿ.ವಿ. ಪತ್ರಿಕೆಗಳಿವೆ ಎನ್ನುವಾಗ ಗಡಿ ಭದ್ರತಾ ಪಡೆಯವರು ಬಂದು ಮೂರುನಾಲ್ಕು ತಿಂಗಳು ಸುತ್ತಿ, ಅದು ಬರುವಾಗಲೇ ನಮ್ಮಂಥವರು ವಿರೋಧ ಮಾಡಿದೆವು. ಕಾರಣ ಏನೆಂದರೆ, ಅದು ಅರೆಮಿಲಿಟರಿ ಪಡೆ. ಇಂಡಿಯಾ ದೇಶದ ಮಿಲಿಟರಿ ಪಡೆ ಬಂದು ಒಬ್ಬ ಕಳ್ಳನನ್ನು ಹಿಡಿಯುವುದಕ್ಕಾಗಲಿಲ್ಲ ಅಂದರೆ ಪ್ರಪಂಚದ ಒಂದು ರಾಜಕೀಯ ರಂಗದಲ್ಲಿ ನಮಗೆ ಅವಮಾನ. ಆದರೂ ಕೂಡ ಅವರು ಬಂದು ಮೂರು ನಾಲ್ಕು ತಿಂಗಳು ಇದ್ದರೂ ಹಿಡಿಯುವುದಕ್ಕಾಗಲಿಲ್ಲ. ಇವತ್ತು ಅವನಿಗೆ ತಮಿಳುನಾಡಿನಲ್ಲಿ ರಾಜಕೀಯ ವಾತಾವರಣ ಬದಲಾವಣೆ ಆದಮೇಲೆ ಪೂಲನ್ ದೇವಿಗೆ ಹೋಲಿಸುತ್ತಾರೆ. ಪೂಲನ್ ದೇವಿ ಯಾರೂ ಜನರನ್ನು ಕೊಂದಿಲ್ಲ. ಸರ್ಕಾರಕ್ಕೆ ವಿರೋಧಿಯಾಗಿರಲಿಲ್ಲ. ಯಾರೋ ಆಕೆಗೆ ತೊಂದರೆ ಕೊಟ್ಟವರ ಬಗ್ಗೆ ಕೋಪ ಇಟ್ಟುಕೊಂಡಿದ್ದಳು. ಆದರೆ ವೀರಪ್ಪನ್ ನೂರಾರು ಜನ ಅಧಿಕಾರಿಗಳನ್ನು ಕೊಂದು ಸರ್ಕಾರಗಳಿಗೆ ಸವಾಲಾಗಿರುವವನಿಗೆ ಇವತ್ತು ರಾಜಕೀಯ ಒತ್ತಡದಲ್ಲಿ ಏನೇ ಬಂದರೂ ಕೂಡ ತಮಿಳುನಾಡಿನ ವಾತಾವರಣ ಏನೇ ಇದ್ದರೂ ಸರಿ ವೀರಪ್ಪನ್ನನ್ನು ಹಿಡಿಯುವುದರಲ್ಲಿ ನಮ್ಮ ಕರ್ನಾಟಕ ಸರ್ಕಾರ... ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ, ಅವನನ್ನು ಸಂದರ್ಶನ ಮಾಡಿದಂಥ ಪತ್ರಕರ್ತರನ್ನು, ಅದರ ವಿಡಿಯೋ ತೆಗೆದವರನ್ನು ಬಂಧಿಸಬೇಕು ಎಂದು ನಾನು ಸರ್ಕಾರವನ್ನೂ ಒತ್ತಾಯ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :– ಅಧ್ಯಕ್ಷರೇ, ಹೀಗಾದರೆ ಪತ್ರಕರ್ತರು ಕೆಲಸ ಮಾಡುವುದಕ್ಕಾಗುವುದಿಲ್ಲ. ನಾನು ಹೇಳುತ್ತೇನೆ, ಫ್ರೀಡಂ ಆಫ್ ಸ್ಪೀಚ್, ಇನ್‌ಫರ್ಮೇಷನ್ ಇದೆ. ಇದೇ ವಿಷಯ ಈಗಾಗಲೇ ಹೈಕೋರ್ಟಿಗೆ ಹೋಗಿದೆ. ಅವರನ್ನು....

ಉಪಾಧ್ಯಕ್ಷರು :– ಅವರು ಉತ್ತರ ಹೇಳುತ್ತಾರೆ ಕೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ :– ಇನ್‌ವೆಸ್ಟಿಗೇಟಿಂಗ್ ಏಜೆನ್ಸಿ, ನೀವು ಮಾಡುವುದಕ್ಕಾಗದೇ ಇರುವುದನ್ನು ಅವರು ಮಾಡಿ ತೋರಿಸಿದ್ದಾರೆ.

ಉಪಾಧ್ಯಕ್ಷರು :- ಅವರು ಹೇಳುವುದನ್ನೇ ನೀವು ಕೇಳದೆ ಮಾತನಾಡಿದರೆ ಹೇಗೆ? ಅವರು ಉತ್ತರ ಹೇಳುತ್ತಾರೆ ತಾವು ಕೇಳಿರಿ.

ಶ್ರೀ ಜೆ. ಹೆಚ್. ಪಟೇಲ್ :- ವೀರಪ್ಪನನ್ನು ಬಂಧಿಸುವುದಕ್ಕಾಗಲಿಲ್ಲ ಅಂತ ಪತ್ರಕರ್ತರನ್ನು ಬಂಧಿಸಿದರೆ ನಗುತ್ತಾರೆ ಜನಗಳು.

ಶ್ರೀ ಬಿ. ಮುನಿಯಪ್ಪ :- ಸನ್ಮಾನ್ಯ ಮುಖ್ಯಮಂತ್ರಿಗಳೇ, ನಾನು ಪತ್ರಕರ್ತನನ್ನು ಬಂಧಿಸಿ ಅಂತ ಹೇಳಲಿಲ್ಲ. ಒಬ್ಬ ದೇಶದ್ರೋಹಿಗೆ ಸಂಪರ್ಕ ಇರತಕ್ಕಂಥ ಪತ್ರಕರ್ತರನ್ನು, ಅವನ ವೀಡಿಯೊ ಕ್ಯಾಸೆಟ್ ತೆಗೆದು ಪ್ರಪಂಚಕ್ಕೆ ತೋರಿಸಿ, ಅವನು ಮೇಧಾವಿ, ಹುತಾತ್ಮ ಅಂತ ಪಬ್ಲಿಷ್ ಮಾಡುತ್ತಾರಲ್ಲ ಅಂಥ ಪತ್ರಕರ್ತರನ್ನು.

ಶ್ರೀ ಜೆ. ಹೆಚ್. ಪಟೇಲ್ :- ಅಡ್ವೆಂಚರಸ್ ಜರ್ನಲಿಸಂ ಅಂತ ಇರುತ್ತದೆ. ಅವನೂ ಸಾಹಸ ಮಾಡಿದ್ದಾನೆ. ವೀರಪ್ಪನ್ ಹೇಗಿದ್ದಾನೆ ಎಂದು ನಾನೇ ನೋಡಿರಲಿಲ್ಲ. ಬರೀ ಫೋಟೊ ನೋಡಿದ್ದೆ. ಈಗ ವಿಡಿಯೋ ನೋಡಿದಮೇಲೆ ಅಂಥವರು ಯಾವ ವಾತಾವರಣದಲ್ಲಿರುತ್ತಾರೆ, ಹೇಗಿರುತ್ತಾರೆ ಅಂತ ನೋಡಿದ ಮೇಲೆ ಅವರನ್ನು ಬಂಧಿಸತಕ್ಕ ಅಧಿಕಾರಿಗಳಿಗೆ ಅನುಕೂಲ ಆಗುತ್ತದೆ ಆ ಲೋಕೇಷನ್ ನೋಡಿಕೊಂಡು.

ಶ್ರೀ ವಾಟಾಳ್ ನಾಗರಾಜ್ :- ತಾವು ವೀಡಿಯೋ ನೋಡಿದ್ದೀರಾ? ಸ್ವತಃ ನೋಡುವುದಕ್ಕಂತೂ ಆಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್ :- ಸ್ವತ: ನೋಡುವುದಕ್ಕಂತೂ ಆಗಲಿಲ್ಲ. ವಿಡಿಯೋ ನೋಡಿದೆ.

ಶ್ರೀ ಸಿ. ಹೆಚ್. ವಿಜಯಶಂಕರ್ :- ನನ್ನ ಅಭಿಪ್ರಾಯ ಇಷ್ಟೆ. ಸರ್ಕಾರಕ್ಕೆ ಈ ಟಿ.ವಿ. ಮಾಧ್ಯಮದ ಮೇಲೆ ಹಿಡಿತ ಇದೆಯೋ ಅಥವಾ ಇಲ್ಲವೋ ಅಂತ. ಏಕೆ ಈ ಪ್ರಶ್ನೆ ಕೇಳುತ್ತೇನೆ ಅಂದರೆ ಈ ಛಾನೆಲ್‌ಗಳ ಮೂಲಕ ಬರುವಂಥ ಕಾರ್ಯಕ್ರಮ ಏನಿವೆ ಏನು ಕಾರ್ಯಕ್ರಮಗಳು ಬೇಕಾದರೂ ಬರಬಹುದೇ, ಯಾವ ರೀತಿಯ ಕಾರ್ಯಕ್ರಮಗಳು ಬೇಕಾದರೂ ಬರಬಹುದೇ? ಅದರ ಮೇಲೆ ಕಿಂಚಿತ್ ನಿಗ್ರಹ ಬೇಡವೇ? ಏಕೆ ನೊಂದು ಈ ಮಾತನ್ನು ನಾನು ಹೇಳುತ್ತಾ ಇದ್ದೇನೆ ಅಂದರೆ, ಈ ಛಾನೆಲ್ ಮೂಲಕ ಬರುವಂಥ ಕಾರ್ಯಕ್ರಮದಲ್ಲಿ, ಈಗ ವೀರಪ್ಪನ್ ವಿಚಾರ ಪ್ರಸ್ತಾಪ ಮಾಡುವಂಥ ಸಮಯದಲ್ಲಿ ಏನು ಬೇಕಾದರೂ ಬರಬಹುದೇ? ಮನೆಮಂದಿ ಎಲ್ಲಾ ಕುಳಿತು ನಾವು, ನಮ್ಮ ತಾಯಿ ತಂದೆ, ನಮ್ಮ ಅಣ್ಣತಮ್ಮ, ಬಂಧುಬಳಗ ಕುಳಿತು ಯಾವುದೇ ಟಿ.ವಿ. ಕಾರ್ಯಕ್ರಮ ಛಾನೆಲ್ ಮೂಲಕ ಬರುವಂಥದ್ದು 70 ಭಾಗ ಕಾರ್ಯಕ್ರಮವನ್ನು ಕುಳಿತು ನೋಡುವುದಕ್ಕಾಗುವುದಿಲ್ಲ ಗೌರವಸ್ಥರ ಮನೆಗಳಲ್ಲಿ. ಆ ಕಾರ್ಯಕ್ರಮಗಳ ಮೇಲೆ ಸರ್ಕಾರಕ್ಕೇನೂ ನಿಗ್ರಹ ಇಲ್ಲವೆ? ಏತಕ್ಕೆ ನಿಗ್ರಹಿಸುವುದಕ್ಕೆ ಸಾಧ್ಯವಿಲ್ಲ? ಸರ್ಕಾರ ಇದರ ಬಗ್ಗೆ ಏನು ಚಿಂತನೆ ಮಾಡುತ್ತಿದೆ? ಆದ್ದರಿಂದ ಈ ಛಾನೆಲ್ ಮೂಲಕ ಬರುವ ಕಾರ್ಯಕ್ರಮಗಳ ಬಗ್ಗೆವಿಶೇಷವಾದ ಗಮನಹರಿಸಿ ಅದನ್ನು ನಿಗ್ರಹಿಸುವುದಕ್ಕೆ ಏನಾದರೂ ವಿಶೇಷ ವ್ಯವಸ್ಥೆ ಮಾಡಲಿ ಸರ್ಕಾರ. ಇಲ್ಲದಿದ್ದರೆ ನಾಗರೀಕ ಸಮಾಜ ರೂಪಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಉಪಾಧ್ಯಕ್ಷರು :- ಈಗ ಪ್ರಮೀಳಾ ನೇಸರ್ಗಿಯವರು ಏನು ವಿಚಾರ ಪ್ರಸ್ತಾಪ ಮಾಡಿದ್ದಾರೆ. ತಾವು ಕುಳಿತುಕೊಳ್ಳಿ, ಪುಟ್ಟಣ್ಣಯ್ಯನವರೇ, ಎಲ್ಲಾ ವಿಷಯದಲ್ಲೂ ತಾವು ಮಾತನಾಡುತ್ತೇನೆ ಎಂದರೆ ತಾವೇನು ನೋಟೀಸ್ ಕೊಟ್ಟಿದ್ದೀರೋ ಎಲ್ಲಾ ವಿಷಯದಲ್ಲೂ ತಾವು ಹೀಗೆ ಮಾಡಿದರೆ ಹೇಗೆ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ವೀರಪ್ಪನ್ ಇರುವ ಜಾಗಕ್ಕೆ ಹೋಗಿ ಬಂದಿರುವವನು ಸಾರ್ ನಾನು. ಸಾರ್ ದಂಟಳ್ಳಿ ಆಲ್ಲೆಲ್ಲಾ ಸುತ್ತಮುತ್ತ ಹಳ್ಳಿಯಲ್ಲಿ 13 ವರ್ಷದ ಒಬ್ಬ ಅಡಿಗೆ ಭಟ್ಟ ಸಾರ್ ಅವನು. ಅಡಿಗೆ ಮಾಡಿಕೊಂಡಿದ್ದವನು ಇವತ್ತು ವೀರಪ್ಪ ಅಂತ ಹೆಸರು ಮಾಡಿದ್ದಾನೆ ಅವನು. ಅವನು ಇನ್ಯಾರೂ ಅಲ್ಲ. ಮಹಾ ದೊಡ್ಡ ಸುದ್ದಿ ಏನಲ್ಲ. ನಾವು ಅವನಿಗೆ ಬಹಳ ಸ್ಕೋಪ್ ಕೊಟ್ಟಿದ್ದೇವೆ ಅಷ್ಟೇ. ಪೋಲೀಸಿನವರನ್ನು ನಮ್ಮವರನ್ನು ಕಳೆದುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ಮನವಿ ಮಾಡಿಕೊಳ್ಳುವುದು ಏನೆಂದರೆ, ಅವನಷ್ಟೇನ್ನೋ ಭಾರಿ ದೊಡ್ಡವನು ಎಂದು ನಾನೇನೂ ಹೇಳುತ್ತಿಲ್ಲ. ತಾವು ಏನು ಕೆಲವು ಮುಖ್ಯವಾದ ವಿಷಯಗಳನ್ನು ಈ ಸದನದಲ್ಲಿ ಹೇಳಬಾರದು ಅಂತ ಇದ್ದೀರಿ ನಮ್ಮ ಮನಸ್ಸಿಗೆ, ಅಂದರೆ ವಿರೋಧ ಪಕ್ಷದವರ ಮನಸ್ಸಿಗೆ, ಕನಿಷ್ಟ ನಮ್ಮ ಮನಸ್ಸಿಗೆ ಸಮಾಧಾನವಾಗುವುದಕ್ಕೆ ಒಂದು ಮೀಟಿಂಗಾದರೂ ಕರೆದು ನಮ್ಮ ಜೊತೆಯಲ್ಲಿ ಯಾವ ರೀತಿ ಕಾರ್ಯ ರೂಪಿಸಿದ್ದೀರಿ ಎಂಬ ಬಗ್ಗೆ ಸ್ವಲ್ಪ ನಮಗೆ ಮಾಹಿತಿ ಕೊಟ್ಟರೆ ತುಂಬಾ ಒಳ್ಳೆಯದು. ಅದರ ಬಗ್ಗೆ ತಾವು ಸರ್ಕಾರ ಆಲೋಚನೆ ಮಾಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ನಾವು ಇಲ್ಲಿ ಚರ್ಚೆ ಮಾಡತಕ್ಕಂಥದ್ದೇ ಸೂಕ್ತ ಅಲ್ಲ. ಮತ್ತೆ ಮಾನ್ಯ ಮುನಿಯಪ್ಪ ನವರು ಏನು ಹೇಳುತ್ತಾರೆ, ಈಗ ಅವನ್ನು ಒಬ್ಬ ಜರ್ನಲಿಸ್ಟ್ ಹೋಗಿ ಮಾಡಿರ ತಕ್ಕದ್ದು, ಅಷ್ಟರಮಟ್ಟಿಗೆ ಇನ್‌ಫರ್ಮೇಷನ್ ಸಿಕ್ಕಿದೆ, ಅವನೆಲ್ಲಿದ್ದಾನೆ ಹೇಗಿದ್ದಾನೆ ಅಂತ. ಅದಕ್ಕಾಗಿ ನಾವು ಅಭಿನಂದಿಸಬೇಕಾಗುತ್ತದೆ.

ಶ್ರೀ ಬಿ. ಮುನಿಯಪ್ಪ :- ನಾನು ಒಂದು ಹೇಳಿಬಿಡುತ್ತೇನೆ. ಆ ಜರ್ನಲಿಸ್ಟ್ ಆಕಸ್ಮಿಕ ವಾದವನಲ್ಲ. ಹಲವಾರು ಬಾರಿ ಸಂಧಿಸಿದ್ದಾನೆ. ಹಲವಾರು ಬಾರಿ ಸಂಧಿಸಿರುವಂಥ ಒಬ್ಬ ಪತ್ರಕರ್ತ ಈ ದೇಶಕ್ಕೆ ಈ ರಾಜ್ಯ ಸರ್ಕಾರಗಳಿಗೆ ಅವನು ಯಾವ ಜಾಗದಲ್ಲಿದ್ದಾನೆ ಎಂದು ಮಾಹಿತಿ ಕೊಡುವುದಕ್ಕಾಗುವುದಿಲ್ಲವೇ? ಅವನು ದೇಶಭಕ್ತ ಅಲ್ಲವೇ? ಅವನಿಗೆ ಈ ದೇಶದ ಅಧಿಕಾರಿಗಳ ಪ್ರಾಣದ ಬಗ್ಗೆ ಭಯ ಇರಲಿಲ್ಲವೇ? ಪ್ರಾಣ ಕಾಪಾಡಬೇಕು ಎನ್ನುವ ಆಸಕ್ತಿ ಇಲ್ಲವೇ ಆ ಪತ್ರಕರ್ತನಿಗೆ? ಅವನನ್ನು ಹೋಗಿ ಭೇಟಿ ಮಾಡಿ ವೀಡಿಯೋ ಕ್ಯಾಸೆಟ್ ಮಾಡಿ ಪತ್ರಿಕೆಯಲ್ಲಿ ಫೋಟೋ ಹಾಕುವಾಗ ಅವನಿಗೆ ನಿಜವಾದ ದೇಶಪ್ರೇಮ ಇತ್ತು ಎಂದರೆ ಅವನು ಸರ್ಕಾರಗಳಿಗೆ ಎಲ್ಲಿದ್ದಾನೆ ಏನು ಅಂತ ತಿಳಿಸಲಿ.

ಒಬ್ಬ ಮಾನ್ಯ ಸದಸ್ಯರು:- ಅವನನ್ನು ಮುಗಿಸಿಬಿಟ್ಟರೆ ನೀವು ಹೋಗುತ್ತಿರೋ?

ಶ್ರೀ ಬಿ. ಮುನಿಯಪ್ಪ :- ವೀಡಿಯೋ ಕ್ಯಾಸೆಟ್ ಹಾಕಿಬಿಟ್ಟು ದೇಶದಲ್ಲೆಲ್ಲ ಪ್ರಚಾರ ಮಾಡುವುದು, ಪತ್ರಿಕೆಯಲ್ಲಿ ಫೋಟೋ ಹಾಕಿಸುವುದು ದುಡ್ಡು ಮಾಡುವುದ ಕ್ಕೋಸ್ಕರವೇ ಇರುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಗೌರವಾನ್ವಿತ ಸದಸ್ಯರಿಗೆ ಇದರ ಬಗ್ಗೆ ಮಾಹಿತಿ ಇದ್ದರೆ ಉನ್ನತ ಅಧಿಕಾರಿಗಳು, ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಅವರಲ್ಲಿ ಇರತಕ್ಕಂಥ ಮಾಹಿತಿಯನ್ನು ಕೊಡಲಿ. ನನಗೆ ಗೊತ್ತಿರುವಹಾಗೆ ಆಟರೇನ್, ಅಲ್ಲಿ ಮೂರು-ನಾಲ್ಕು ವರ್ಷಗಳಲ್ಲಿ ಇವರು ಮಾಡಿರತಕ್ಕಂಥ ಕೆಲಸ, ನಮ್ಮ ಕರ್ನಾಟಕ ಪೋಲೀಸರು ಬಹಳ ಉತ್ತಮವಾದ ಕೆಲಸ ಮಾಡಿದ್ದಾರೆ. ಅಲ್ಲಿ ರತಕ್ಕಂಥ ನಮ್ಮ ಪೋಲೀಸರು ಯಾರಿದ್ದಾರೆ, ಅವರು ಜೀವದ ಮೇಲೆ ಹಂಗು ತೊರೆದು ಕೆಲಸ ಮಾಡಿದ್ದಾರೆ. ನಾನು ಮತ್ತು ಉಪಮುಖ್ಯಮಂತ್ರಿಗಳು ಖುದ್ದಾಗಿ ಎಲ್ಲವನ್ನೂ ಸಹಿತ ನೋಡಿ ಬಂದಿದ್ದೇವೆ. ಶಂಕರ್ ಬಿದರಿ ಅವರಿಂದ ಹಿಡಿದು ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ವರೆಗೂ ಬಹಳ ಒಳ್ಳೆಯ, ಶ್ಲಾಘನೀಯವಾದಂಥ ಕೆಲಸವನ್ನು ಅವರು ಮಾಡಿದ್ದಾರೆ. ಆದರೆ ಅವರು ಎಲ್ಲರಿಗೂ ಗೊತ್ತಿರುವ ಹಾಗೆ ಅದು ಗಂಧವನ್ನು ಸಾಗಾಣಿಕೆ ಮಾಡತಕ್ಕಂಥ, ದಂತವನ್ನು ಕಳ್ಳಸಾಗಾಣಿಕೆ ಮಾಡತಕ್ಕಂಥ ಒಂದು ಕಳ್ಳರ ಗುಂಪು. ಅದರ ಬಗ್ಗೆ ಅವರಿಗೆ ಮಾಹಿತಿ ಇದ್ದರೆ ಕೊಡಲಿ. ಸರ್ಕಾರದಿಂದ ಎಲ್ಲ ಪ್ರಯತ್ನವನ್ನು ಇದುವರೆಗೆ ನಾವು ಮಾಡಿದ್ದೇವೆ. ಇದರ ಬಗ್ಗೆ ಇಲ್ಲಿ ಚರ್ಚೆ ಮಾಡದೆ ನಮ್ಮ ಅಧಿಕಾರಿಗಳ ಜೊತೆಯಲ್ಲಿ, ಅದಕ್ಕೆ ಸಂಬಂಧಪಟ್ಟ ಅಧಿಕಾರಿಯಲ್ಲಿಗೆ ಬಂದು ಹೆಚ್ಚಿನ ಮಾಹಿತಿ ಕೊಟ್ಟರೆ ನಾವು ಬೇಗ ಕೆಲಸವನ್ನು ಪೂರೈಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಹಿಂದಿನ ಗೃಹಸಚಿವರು ಇದರಲ್ಲಿ ಚರ್ಚೆಯನ್ನೇ ಮಾಡಬಾರದು, ಎಲ್ಲ ಗೋಪ್ಯವಾಗಿ ಇಡೋಣ, ಆದಷ್ಟು ಇದನ್ನು ಮಾತನಾಡದೆ ಇರುವುದೇ ಅನುಕೂಲವೆಂದು ಹೇಳಿ ಒಂದು ರೀತಿಯಲ್ಲಿ ಇಡೀ ಸಭೆಗೆ ಬೆದರಿಕೆಗೆ ಬಿದ್ದಹಾಗೆ ಇದೆ. ಇವರ ಮಾತುಕತೆ ನೋಡಿದರೆ, ಈ ಸಭೆಯಲ್ಲಿ ಇದರ ಬಗ್ಗೆ ಚರ್ಚೆಯನ್ನೇ ಮಾಡಬಾರದು ಎಂದು ಐದು ವರ್ಷಗಳಿಂದ ಇದನ್ನೇ ಹೇಳಿ ಕೊಂಡು ಬಂದಿದ್ದೇವೆ. ಇದರ ಬಗ್ಗೆ ಚರ್ಚೆ ಬೇಡ, ಏನಾದರೂ ವಿಚಾರ ಇದ್ದರೆ ಗುಟ್ಟಾಗಿ ತಂದುಕೊಟ್ಟುಬಿಡಿ ಎಂದು ಇದು ನನಗೆ ಆರ್ಥವಾಗುತ್ತಿಲ್ಲ. ಇದೇನು ಹುಡುಗಾಟವೇ? ಈ ದೇಶವೇ ನೋಡುತ್ತಿದೆ. ರಾಷ್ಟ್ರದ ಗಡಿಭದ್ರತಾ ಪಡೆ ಇಲ್ಲಿಗೆ ಬಂದ ಆತನನ್ನು ಹಿಡಿಯುವುದಕ್ಕೆ ಆಗಿಲ್ಲವೆಂದರೆ ಇದು ನಾಚಿಕೆಗೇಡಿತನದ ಕೆಲಸ ಆಗುತ್ತಾ ಇದೆ. ಈ ಬಗ್ಗೆ ಚರ್ಚೆಯೇ ಆಗಬಾರದು ಅಂತ ಹೇಳಿದರೆ ಇದಕ್ಕೆ ಏನಾದರೂ ಅರ್ಥ ಇದೆಯೇ? ಪೋಲೀಸ್ ಅಧಿಕಾರಿಗಳ ಬಗ್ಗೆ ಮಾನ್ಯ ಹಿಂದಿನ ಗೃಹಸಚಿವರು ಹೇಳಿದರು. ನಮ್ಮ ಸರ್ಕಾರ ನೇಮಿಸಿರತಕ್ಕಂಥ ಅಧಿಕಾರಿಗಳ ಬಗ್ಗೆ ನಾನು ಪ್ರಶಂಸೆ ಮಾಡುತ್ತೇನೆ. ಇದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಶಂಕರ್ ಬಿದರಿ ಬಗ್ಗೆ ಅವತ್ತೂ ಹೇಳಿದ್ದೇನೆ, ಇವತ್ತೂ ಹೇಳುತ್ತೇನೆ. ನಾವು ನೀವು ಜೊತೆಗೆ

ಚಾಮರಾಜನಗರ, ಕೆಲವು ಕಡೆ ಪ್ರದೇಶಗಳಿಗೆಲ್ಲ ಹೋಗಿದ್ದೆವು. ಆದರ ಬಗ್ಗೆ ನಮ್ಮ ತಕರಾರು ಇಲ್ಲ. ನೀವು ಬೇಗ ಹಿಡಿಯುವುದಕ್ಕೆ ನಿಮ್ಮಲ್ಲಿ ವ್ಯವಸ್ಥೆ ಇದೆ. ಹಿಂದಿನ ಸಾರಿ ಚರ್ಚೆ ನಡೆಯುವಾಗ ಇನ್ನೇನು ಎರಡು ಗಂಟೆಯಲ್ಲಿ ಹಿಡಿದುಬಿಡುತ್ತಾರೆ, ಮೂರು ಗಂಟೆಯಲ್ಲಿ ಹಿಡಿಯುತ್ತಾರೆ ಎನ್ನುವ ಸುದ್ದಿ ಹುಟ್ಟಿ ಇನ್ನೇನು ಹಿಡಿದೇಬಿಟ್ಟರ ಬಹುದು ಎನ್ನತಕ್ಕಂಥ ಒಂದು ವಾತಾವರಣ ನಿರ್ಮಾಣವಾಗಿತ್ತು. ನನಗನ್ನಿತ್ತದೆ, ನಾವು ಇವತ್ತು ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ತಮಿಳುನಾಡು ಮತ್ತು ಕರ್ನಾಟಕದ ನಡುವೆ ಈ ವಿಚಾರದಲ್ಲಿ ಹೊಂದಾಣಿಕೆ ಇಲ್ಲ. ತಮಿಳುನಾಡು ಪೋಲೀಸರು ಮತ್ತು ಕರ್ನಾಟಕದ ಪೋಲೀಸರಲ್ಲಿ ಹೊಂದಾಣಿಕೆ ಇಲ್ಲ. ತಮಿಳು ನಾಡಿನ ಅರಣ್ಯ ಇಲಾಖೆ ಮತ್ತು ಕರ್ನಾಟಕದ ಪೋಲೀಸರಲ್ಲಿ ಹೊಂದಾಣಿಕೆ ಇಲ್ಲ. ತಮಿಳುನಾಡಿನ ಅರಣ್ಯ ಇಲಾಖೆ ಮತ್ತು ಕರ್ನಾಟಕದ ಅರಣ್ಯ ಇಲಾಖೆ ನಡುವೆ ಹೊಂದಾಣಿಕೆ ಇಲ್ಲ. ಈ ವ್ಯವಸ್ಥೆ ಇರುವಾಗ ಇನ್ನು ನೂರು ವರ್ಷವಾದರೂ, ಇದೇ ಪರಿಸ್ಥಿತಿ ನಿರ್ಮಾಣವಾದರೆ ಖಂಡಿತ ಹಿಡಿಯುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸುತ್ತೇನೆ.

ಉಪಾಧ್ಯಕ್ಷರು :- ಅಶೋಕ ಕಾಟ್ವೆ ಅವರು, ಎರಡು ನಿಮಿಷಗಳಲ್ಲಿ ನೀವು ಪ್ರಸ್ತಾಪ ಮಾಡಿಬಿಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ :- ನನಗೂ ಅವಕಾಶ ಕೊಡಿ.

ಉಪಾಧ್ಯಕ್ಷರು :- ನಂತರ ಅವಕಾಶ ಕೊಡುತ್ತೇನೆ. ಎಲ್ಲರೂ ಮಾತನಾಡಿದರೆ ಹೇಗೆ?

(ಋ) ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ನೀರು ಬಂದ್ ಮಾಡುವು ದಾಗಿ ಹೇಳಿಕೆ ನೀಡಿರುವುದು.

ಶ್ರೀ ಅಶೋಕ್ ಕಾಟ್ವೆ :- ಮಾನ್ಯ ಉಪಾಧ್ಯಕ್ಷರೇ, ಆಗಸ್ಟ್ 1 ರಿಂದ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ನೀರು ಬಂದ್ ಮಾಡುತ್ತೇವೆ ಎಂದು ಹೇಳಿ ಜಲಮಂಡಳಿಯ ಸೂಪರಿಟೆಂಡೆಂಟ್ ಇಂಜಿನಿಯರ್ ಅವರು ಒಂದು ಎಚ್ಚರಿಕೆಯ ಪತ್ರವನ್ನು ಬರೆದಿದ್ದಾರೆ. ಈ ಎಚ್ಚರಿಕೆಯ ಪತ್ರ ಇಂಗ್ಲೀಷಿನಲ್ಲಿದ್ದು ಅದನ್ನು ತಮ್ಮ ಕಡೆಗೆ ಕಳಿಸಿಕೊಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಈ ಪತ್ರ ಬರೆಯಲು ಈ ಅಭಿಯಂತರಿಗೆ ಅಧಿಕಾರ ನೀಡಿದವರು ಯಾರು? ಒಂದು ವೇಳೆ ಈ ಅಧಿಕಾರಿ ಸ್ವಇಚ್ಛೆಯಿಂದ ಈ ಪತ್ರ ಬರೆದಿದ್ದರೆ ಅವರು ಕೂಡಲೇ ರಾಜೀನಾಮೆ ಕೊಡಬೇಕು. ಸದರಿ ವಿಷಯದಲ್ಲಿ ರಾಜ್ಯಸರ್ಕಾರದಿಂದ ಯಾವುದಾದರೂ ನಿರ್ದೇಶನ ಅಧಿಕಾರಿಗೆ ಬಂದಿದೆಯೇ ಹೇಗೆ? ಎಲ್ಲ ಮಹಾನಗರಪಾಲಿಕೆಗಳಿಗೆ ಇದೇ ರೀತಿಯ ಪತ್ರ ಹೋಗಿದೆಯೇ ಅಥವಾ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ ಮಾತ್ರ ನೀಡಲಾಗಿದೆಯೇ ಎಂದು ಸರ್ಕಾರ ತಿಳಿಸಬೇಕು. ಈಗಾಗಲೇ ಜನತೆಗೆ ಮೂರು ದಿವಸಗಳಿಗೊಮ್ಮೆ ನೀರು ಕೊಡುತ್ತಿರುವಾಗ, ಈ ರೀತಿ ಬೆದರಿಗೆ ಪತ್ರ ಬಂದಿರುವುದರಿಂದ ಜನರು ಭಯಭೀತರಾಗಿದ್ದಾರೆ. 12 ಕೋಟಿ 50 ಲಕ್ಷ ರೂಪಾಯಿ ಬಾಕಿ ಇದೆಯೆಂದು ಹೇಳಿ, ಹಾಗೂ ರಾಜ್ಯಸರ್ಕಾರ ಜಕಾತಿ ಪರಿಹಾರ ಧನದಿಂದ ಕಡಿತ ಮಾಡಿದ ಹಣದಷ್ಟು ಜಲಮಂಡಳಿಯಲ್ಲಿ....